ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 25-29
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಹೆಚ್. ನಾಗವೇಣಿಯವರ ಕಸಬರಿಕೆ ಕಥೆ : ವರ್ಗ ಸಂಘರ್ಷದ ಪ್ರತಿರೋಧದ ನೆಲೆಗಳು

**ಮಧು ಟಿ**
ಸಂಶೋಧನಾ ವಿದ್ಯಾರ್ಥಿ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ. ಶಿವಮೊಗ್ಗ.

***Abstract:***
*ಕನ್ನಡ ಸಾಹಿತ್ಯದ ಸಮಕಾಲೀನ ಮಹಿಳಾ ಬರಹಗಾರ್ತಿಯರಲ್ಲಿ ವಿಭಿನ್ನವಾದ ಕಥಾ ವಸ್ತು ಮತ್ತು ತಮ್ಮದೇ ಆದ ವಿಶಿಷ್ಟವಾದ ನಿರೂಪಣೆಯ ಮೂಲಕ ಕನ್ನಡ ಸಾಹಿತ್ಯದಲ್ಲಿ ಗುರುತಿಸಿಕೊಂಡ ಲೇಖಕಿ ಹೆಚ್. ನಾಗವೇಣಿ. ಇವರ ಕಾದಂಬರಿ– ಕಥೆಗಳಲ್ಲಿ ಕರಾವಳಿ ತೀರದ ಜನರ ಬದುಕು ಬವಣೆ, ಪರಿಸರ, ಸಂಸ್ಕೃತಿ ಮತ್ತು ಅಲ್ಲಿನ ಸಮಾಜದಲ್ಲಿನ ತಾರತಮ್ಯಗಳನ್ನು ಹಾಗೂ ವರ್ಗ ಸಂಘರ್ಷಗಳನ್ನು ಕಣ್ಣಿಗೆ ಕಟ್ಟುವಂತೆ ವಾಸ್ತವದ ಎಚ್ಚರಿಕೆಯೊಂದಿಗೆ ತಳಸಮುದಾಯದ ಧ್ವನಿಯಾಗಿದ್ದಾರೆ.*

**Keywords:** *ಕಸಬರಿಕೆ, ಕರಾವಳಿ ಪ್ರದೇಶ, ವರ್ಗ ಸಂಘರ್ಷ, ಪ್ರತಿರೋಧದ ನೆಲೆಗಳು, ಗಾಂಧಿ ಬಂದ.*

## ಪೀಠಿಕೆ

ಊಳಿಗಮಾನ್ಯ ಪದ್ಧತಿಯನ್ನು ವಿರೋಧಿಸುದರ ಜೊತೆಗೆ ಕರಾವಳಿ ಮಹಿಳೆಯರ ಹೋರಾಟದ ಬದುಕು ಮತ್ತು ಅಸ್ತಿತ್ವವನ್ನು ಹೆಚ್. ನಾಗವೇಣಿ ಅವರ ಬರಹದಲ್ಲಿ ಕಾಣಬಹುದಾಗಿದೆ. ಇವರ 'ಗಾಂಧಿ ಬಂದ' ಕಾದಂಬರಿ ಸಾಹಿತ್ಯವಲಯದಲ್ಲಿ ಕರಾವಳಿ ತೀರದ ಸಂಸ್ಕೃತಿಯನ್ನು ಹಾಗೂ ಅನೇಕ ಸಮುದಾಯಗಳ ನಡುವಿನ ವರ್ಗಸಂಘರ್ಷದ ಜೊತೆಗೆ ಕರಾವಳಿ ತೀರದ ಕೋಮುಗಲಭೆ, ಸಂಪ್ರಾದಾಯಗಳನ್ನು ಮೀರಿ ಬದಕನ್ನು ಆಯ್ಕೆ ಮಾಡಿಕೊಂಡ ದ್ರೌಪದಿಯ ಬದುಕು ಮತ್ತೆ ಸಂಕಷ್ಟಕ್ಕೆ ಸಿಲುಕಿ ಬದುಕು ಘೋರವಾದ ಸಂದರ್ಭದಲ್ಲಿ ಸ್ವತಃ ತಂದೆಯೇ ಮಗಳ ದುರಂತಕ್ಕೆ ಮರುಗದೆ ಜಾತಿಧರ್ಮವೇ ಮುಖ್ಯವಾಗುವ ಮಾನವೀಯತೆಯನ್ನು ಮರೆತು ಬದುಕುವ ಮನಸ್ಥಿತಿಯನ್ನು, ವಿಧವಾ ಪುನರ್ ವಿವಾಹವನ್ನು ಪ್ರೋತ್ಸಾಹಿಸುವ, ಮತ್ತು ಮನುಷ್ಯ ಸಂಬಂಧಗಳ ಬಗ್ಗೆ ಮತ್ತು ಧರ್ಮ ಜಾತಿ ಸಂಪ್ರದಾಯಗಳನ್ನು ಮೀರಿ ಮಾನವೀಯತೆ ನೆಲೆಯಲ್ಲಿ ಬದುಕು ಮನುಷ್ಯ ಸಂಬಂಧವನ್ನು, ತಳಸಮುದಾಯ ಶೋಷಣೆಯನ್ನು ಕಾದಂಬರಿಯಲ್ಲಿ ಮುಖ್ಯವಾಗಿ ಗುರುತಿಸಬಹುದು. ಇವರ ಕಥೆಗಳಲ್ಲಿ ಮುಖ್ಯವಾಗಿ ಸಾಹಿತ್ಯ ವಲಯದಲ್ಲಿ ಚರ್ಚೆಗೆ ಒಳಗಾದದ್ದು ಧಣಿಗಳ ಬೆಳ್ಳಿ ಲೋಟ, ಈ ಕತೆಯಲ್ಲಿ ಮುಖ್ಯವಾಗಿ ಊಳಿಗಮಾನ್ಯ ವ್ಯವಸ್ಥೆಯಿಂದ ಮೇಲ್ವರ್ಗದವರು ತಳಸಮುದಾಯದಗಳನ್ನು ಶೋಷಿಸುವ ಅಂಶ ಮುಖ್ಯವಾಗಿದೆ. ಆದರೆ ಕತೆಯ ಕೊನೆಯಲ್ಲಿ ಧಣಿಗಳ ದೌರ್ಜನ್ಯಕ್ಕೆ ಚೆನ್ನಮ್ಮ ತೋರುವ ಪ್ರತಿರೋಧ ಮೇಲ್ವರ್ಗದವರಿಗೆ ಎಚ್ಚರಿಕೆ. ತಳಸಮುದಾಯಗಳು ತಮ್ಮ ಬದುಕಿ ಅನಿವಾರ್ಯತೆಗಾಗಿ ಶೋಷಣೆಗಳನ್ನು ಸಹಿಸಿಕೊಂಡರು.

ಒಂದು ಹಂತದವರೆಗೆ ಮಾತ್ರ ಅವರ ಸ್ವಾಭಿಮಾನಕ್ಕೆ ಬಿಟ್ಟು ಬಿದ್ದ ಸಂದರ್ಭದಲ್ಲಿ ಅವರು

***Please cite this article as:*** ಮಧು ಟಿ. (2024). ಹೆಚ್. ನಾಗವೇಣಿಯವರ ಕಸಬರಿಕೆ ಕಥೆ: ವರ್ಗ ಸಂಘರ್ಷದ ಪ್ರತಿರೋಧದ ನೆಲೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(3), 25–29

ತೋರುವ ಪತ್ರಿರೋಧ ಬಹಳ ದೊಡ್ಡದಾದ ಪರಿಣಾಮ ಸಮಾಜದಲ್ಲಿ ಉಂಟಾಗುತ್ತದೆ. ತಳಸಮುದಾಯದ ಮೇಲಿನ ದೌರ್ಜನ್ಯ, ಶೋಷಣೆ ಶತಮಾನದಿಂದಲೂ ಸಾಹಿತ್ಯದಲ್ಲಿ ದಾಖಲಾಗಿದೆ. ಅದಕ್ಕೆ ಅಲ್ಲಲ್ಲಿ ಪ್ರತಿರೋಧದ ನೆಲೆಗಳು ತೋರಿರುವುದನ್ನು ನೋಡಬಹುದು. ಅದರ ತೀವ್ರತೆ ದಲಿತ ಬಂಡಾಯ ಸಾಹಿತ್ಯದ ಕಾಲದಲ್ಲಿ ಸಂಚಲನ ಮೂಡಿಸಿದ "ಇಕ್ರಲಾ ವದಿರ್ಲಾ ಈ ನನ್ನ ಮಕ್ಕಳ ಚರ್ಮ ಎಬ್ರಲಾ.. ಕವಿತೆಯನ್ನು ಹೆಚ್ಚು. ಸಿದ್ಧಲಿಂಗಯ್ಯನವರ 1976ರಲ್ಲಿ ಶಿವಮೊಗ್ಗದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯದ ಕವಿ ಸಮ್ಮೇಳನದಲ್ಲಿ ಓದಿದ ಕವಿತೆಯು ತಳಸಮುದಾಯವು ಅನುಭವಿಸಿದ ಶೋಷಣೆ ದೌರ್ಜನ್ಯಕ್ಕೆ ನೀಡಿರುವ ಬಹುದೊಡ್ಡ ಪತ್ರಿರೋಧವನ್ನು ನೋಡಬಹುದು. ಮುಂದಿನ ಸಾಹಿತ್ಯ ಬರಹಗಳಲ್ಲಿ ಅಂತಹ ಪ್ರತಿರೋಧವನ್ನು ತೋರಿರುವ ಕೆಲವು ಕಥೆಗಳು, ಕಾದಂಬರಿಗಳು ಸಿಗುತ್ತದೆ. ಅಂತಹ ಕಥೆಗಳಲ್ಲಿ ಒಂದು ಕುಂ.ವೀರಭದ್ರಪ್ಪನವರ ದೇವರ ಹೆಣ, ಅರವಿಂದ ಮಾಲಗತ್ತಿ, ಬಿ.ಟಿ.ಲಲಿತಾನಾಯ್ಕ, ದೇವನೂರ ಮಹಾದೇವ, ಜಂಬಣ್ಣ ಅಮರಚಿಂತ, ವೈದೇಹಿ, ದು.ಸರಸ್ವತಿ ಮುಂತಾದವರು ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧ ಪ್ರತಿರೋಧವನ್ನು ದಲಿತ ಬಂಡಾಯ ಸಾಹಿತ್ಯದ ಕಾಲದಿಂದ ಇಲ್ಲಿಯವರಗೆ ನಡೆಯುತ್ತಲೇ ಬಂದಿದೆ. ಅಂತಹ ಬರಹಗಳಲ್ಲಿ ಹೆಚ್.ನಾಗವೇಣಿ ಅವರ 'ಗಾಂಧಿ ಬಂದ' ಕಾದಂಬರಿ, ಧಣಿಗಳ ಬೆಳ್ಳಿಲೋಟ ಕತೆಗಳು ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧ ತೋರಿರುವ ಪ್ರತಿರೋಧ ಸೌಮ್ಯ ನೆಲೆಯಲ್ಲಿ ಕಂಡು ಬಂದರೆ ಕಸಬರಿಕೆ ಕಥೆಯಲ್ಲಿ ಎಲ್ಲೆಯನ್ನು ಮೀರಿ ಕೈ ಕೈಮಿಲಾಹಿಸುವ ಹಂತದವರೆಗೆ ತಲುಪಿರುವುದನ್ನು ಕಾಣಬಹುದು.

'ಕಸಬರಿಕೆ' ಕತೆಯಲ್ಲಿ ಪ್ರಾರಂಭದಿಂದಲ್ಲೆ ಚಂದು ಧೂಪದ ಮರದಡಿ ಕುಳಿತು ಆ ದಿನ ಅಮ್ಮಣ್ಣಿಯಮ್ಮನ ಮನೆಯ ಅಂಗಳದಲ್ಲಿ ನಡೆದ ಘಟನೆಯ ಬೇಸರ ಕಳೆಯಲು ಆಕಾಶದಲ್ಲಿನ ನಕ್ಷತ್ರ ನೋಡಾವ ಹೊತ್ತಿಗೆ, ಅಮ್ಮಣ್ಣಿಯಮ್ಮನ ಹಿರಿಯ ಸೊಸೆಯ ಸೀರೆಯ ಅಂಚಿನಲ್ಲಿದ್ದ ನಕ್ಷತ್ರದ ನೆನಪಿನಿಂದ ಅಮ್ಮಣ್ಣಿಯನ್ನು ಮಾತುಗಳು ನೆನಪಿಗೆ ಬಂದು ಅವಳ ಮಾನಸಿಕ ಹಿಂಸೆಗೆ ಕಾರಣವಾಗಿತ್ತು. ಅಮ್ಮಣ್ಣಿಯಮ್ಮ ನಿಂದನೆಯ ಮಾತುಗಳಿಂದ ಚಂದು ದಿನ ದಿನ ಗಟ್ಟಿಯಾಗುತ್ತಿದ್ದಳು. ಈ ಗಟ್ಟಿತನ ಅವತ್ತು ಅವಳು ಅಮ್ಮಣ್ಣಿಯಮ್ಮನ ದೌರ್ಜನ್ಯಕ್ಕೆ ಮನಸ್ಸಿನಲ್ಲಿಯೇ ಹುಟ್ಟು ಪ್ರತಿರೋಧದ ಮಾತುಗಳನ್ನು ಹೀಗಿದೆ "ಇವತ್ತೊಂದು ರಾತ್ರಿ ಕಳೀಲಿ; ನಾಳೆ ಬೆಳ್ಳಿಗೆ ಆ ಬ್ರಾಹ್ಮಣ್ತಿಗೇರಿರುವ ನಾಕಿಂಚು ದಪ್ಪದ ಚರ್ಬಿಯನ್ನು ಒಂದೇ ಪೆಟ್ಟಿಗೆ ಕೆಳಗಿಳಿಸದಿದ್ದರೆ ನಾನ್ಯಾಕೆ ಈ ಮೈಯ್ಯರ ಪಾಡಿಯಲ್ಲಿರಬೇಕು? ಅವ್ವ ಬೊಗಳಿದ್ದನ್ನೆಲ್ಲಾ ತಲೆಬಗ್ಗಿಸಿ, ನುಂಗೀ ನುಂಗೀ ನಂಗೆ ಮೂಗಲ್ಲಿ ಬರುವುದೊಂದೇ ಬಾಕಿ; ಹೆಚ್ಚು ಸಲಿಗೆ ಬಿಟ್ಟರೆ ತಲೆಯಲ್ಲಿ ಕೂತು ಬಾಯಿಗೆ ಹೇಸಿಗೆ ಮಾಡಲು ಹೇಸದ ಬ್ರಾಹ್ಮಣ್ತಿಯದು"[1] ಇಲ್ಲಿ ಕೇವಲ ಚಂದುವಿನ ಮೇಲಿನ ದೌರ್ಜನ್ಯವಲ್ಲ ಅದು ಅವರ ಸಮುದಾಯದ ಮೇಲಿನ ನಿರಂತರ ಶೋಷಣೆಯ ಮಾತುಗಳು, ಕತೆ ಪ್ರಾರಂಭದಿಂದ ಕೊನೆಯವರಗೂ ಚಂದುವನ್ನು ಹೀಯಾಳಿಸುವ ನಿಂದಿಸುವ ಮಾನಸಿಕವಾಗಿ ದೌರ್ಜನ್ಯವನ್ನು ಅಮ್ಮಣ್ಣಿಯಮ್ಮ ನೀಡುತ್ತಾಳೆ ಬರುತ್ತಾಳೆ. ಚಂದು ತನ್ನ ತಂದೆಯ ಬರುವಿಕೆಯನ್ನೆ ಕಾದು ಬಂದ ನಂತರ ಕಡಲ ತೀರಕ್ಕೆ ಹೋಗಿ ಬರುವ ಎಂದಾಗ ರುಕ್ಕಮುಲ್ಯ ಅಮ್ಮಣ್ಣಿಯಮ್ಮನವರ ಮನೆ ಕೆಲಸಕ್ಕೆ ಹೋಗಬೇಕು ಇಲ್ಲದಿದ್ದರೆ ಅವಳ ಬೈಗಳ ಹೆದರಿ ಮನೆಗೆ ಹೋಗಲು ತಿಳಿಸಿದ ಅದಕ್ಕೆ ಪ್ರತಿಯಾಗಿ ಚಂದು "ಅವ್ವ ಸತ್ಲು! ಅವಳ ಹೆಣಾ! ಅವಳ ಬೊಜ್ಜ! ಬಿಕನಾಸಿ ಬ್ರಾಹ್ಮಣ್ತಿ! ಅವಳಿಗೆ ಹೆದ್ರಿ ಹೆದ್ರೀ ನೀನೂ ಸಾಯಿ... ನಾನು ಸಾಯ್ತೀನಿ.." (ನಾಕನೇ ನೀರು, ಹೆಚ್. ನಾಗವೇಣಿ,

[1] ಹೆಚ್. ನಾಗವೇಣಿ. ನಾಕನೇ ನೀರು. ಪುಟ.50

ಪು.ಸಂ.54) ಎಂದು ತಂದೆಯ ಎದುರಲ್ಲಿ ಮನಸ್ಸಿನಲ್ಲಿನ ಅಕ್ರೋಶವನ್ನು ವ್ಯಕ್ತ ಪಡಿಸುತ್ತಾ ಮೇಲ್ವರ್ಗದವರ ದೌರ್ಜನ್ಯ ಶೋಷಣೆ ದಬ್ಬಾಳಿಕೆಯ ಭಯದಲ್ಲೆ ಬದುಕುವ ತಳಸಮುದಾಯ ಆತಂಕವನ್ನು ರುಕ್ಕಮೂಲ್ಯನ ಮನಸ್ಸಿನ ಮಾತುಗಳು ಚಂದುವಿನ ಆಕ್ರೋಶದಲ್ಲಿ ವ್ಯಕ್ತವಾಗಿದೆ. ಇಷ್ಟೇ ಅಲ್ಲದೆ ತಳಸಮುದಾಯವರ ಬದುಕು ಕೂಡ ಮೇಲ್ವರ್ಗದರಿಂದ ನಿರ್ಧರಿತ ಅವರಿಗೆಅವರದೇ ಆದ ಸ್ವತಂತ್ರದ ಬದುಕು ಕೂಡ ಇಲ್ಲ ಎಂಬುದು ಈ ಮಾತಿನಲ್ಲಿ ವ್ಯಕ್ತವಾಗಿದೆ. ಆದರೆ ಮೇಲ್ವರ್ಗದವರನ್ನು ಬೈಯುವಂತೆಯು ಇಲ್ಲ ಅದು ಕೂಡ ಪಾಪದ ಕೆಲಸ ಅದರಿಂದ ಮುಂದಿನ ಜನ್ಮದಲ್ಲಿ ನಾಯಿಯಾಗಿ ಹುಟ್ಟುತ್ತೇವೆ ಎಂಬ ಮೂಢನಂಬಿಕೆಯನ್ನು ತಳಸಮುದಾಯವರಲ್ಲಿ ಭಿತ್ತಿರುವುದನ್ನು ರುಕ್ಕ ಮೂಲ್ಯ ತನ್ನ ಮಗಳಿಗೆ ಹೇಳುವ ಬುದ್ದಿ ಮಾತುಗಳನ್ನು ನೋಡಿದ್ದಾರೆ ಮೇಲ್ವರ್ಗದವರು ಭೌದ್ಧಿಕವಾಗಿ ತಳಸಮುದಾಯವನ್ನು ಎಷ್ಟರಮಟ್ಟಿಗೆ ತಮ್ಮ ಅಧಿನತೆಯಲ್ಲಿ ಇರಿಸಿರುವ ಹುನ್ನಾರವನ್ನು ಇಲ್ಲಿ ಲೇಖಕಿ ಸೂಕ್ಷ್ಮವಾಗಿ ತಿಳಿಸಿದ್ದಾರೆ. ಅದಕ್ಕೆ ಪ್ರತಿಕಿಯೆಯಾಗಿ ಚಂದು "ನಾನು ನಾಯಾಗೇ ಹುಟ್ಟೇನೆ, ಬೇಕಿದ್ರೆ ಹುಳವಾಗಿ ಹುಟ್ಟೇನೆ. ಆದ್ರೆ ಆ ಬೋಸುಡಿ ಹಡಬೆ ಅಮ್ಮಣ್ಣಿಯಮ್ಮನಾಗಿ ಮಾತ್ರ ಹುಟ್ಟಲ್ಲ"[2] ಎಂದುತನ್ನ ಪ್ರತಿರೋಧವನ್ನು ವ್ಯಕ್ತ ಪಡಿಸುವುದರ ಹಿಂದೆಮೇಲ್ವರ್ಗದವರ ಬದುಕಿಗಿಂತ ಮೇಗಿಲಾದ ಬದುಕು ಪ್ರಾಣಿಗಳಾಗಿ ಹುಟ್ಟಿದ್ರೆ ಯಾವುದೇ ರೀತಿಯ ಶೋಷಣೆ ದೌರ್ಜನ್ಯಕ್ಕೆ ಒಳಗಾಗದೆ ಒಂದಿಷ್ಟು ಸ್ವತಂತ್ರದ ಬದುಕನ್ನಾದರೂ ಬದುಕಬಹುದು. ಪ್ರಾಣಿಗಳಿಗಿರುವ ಸ್ವತಂತ್ರವೂ ತಳಸಮುದಾಯದ ಜನರಿಗೆ ಸಾಧ್ಯವಾಗದ ಸಮಾಜದಲ್ಲಿ ಬದುಕುತ್ತಿರುವ ಚಿತ್ರಣವನ್ನು ಹಾಗೂ ಶೋಷಣೆಯಿಂದ ಆಗದರೂ ಮುಕ್ತಿ ಪಡಿಯಬುದು ಎಂಬ ಆಶಯವುಚಂದುವಿನ ಈ ಮಾತಿನ ಆಕ್ರೋಶದ ಆಳದಲ್ಲಿ ನೋವು ವ್ಯಕ್ತವಾಗಿದೆ.

ಚಂದು ಮಾರನೇ ದಿನ ಎಲ್ಲಾ ಮರೆತು ಎಂದಿನಂತೆ ಅಮ್ಮಣ್ಣಿಯಮ್ಮನ ಅಂಗಳ ಗೂಡಿಸಲು ಬರುವಾಗ ತನ್ನ ಪ್ರೀಯಕರ ಮಂಜಪ್ಪ ಶೆಟ್ರು ಎಂದೂ ಸಿಗದ ಮಂಜಪ್ಪ ಸಿಕ್ಕ ಓಡನೆಯೇ ಅಮ್ಮಣ್ಣಿಯಮ್ಮನ ಅಂಗಳ ಮರೆತು ಹೋಗಿ ಮಂಜಪ್ಪನೊಂದಿಗೆ ಮಾತಿಗಿಳಿದಳು ಅದು ಸಾಮಾನ್ಯ ಮಾತಲ್ಲ ಅದು ಅರಳು ಹುರಿದಂತೆ ಮಾತನಾಡುತ್ತಿದ್ದಳು. ಇವಳ ಈ ಮಾತಿನ ರಾಗಕ್ಕೆ ಕೋಗಿಲೆಯೂ ತನ್ನ ರಾಗ ಎಂಥದ್ದೂ ಅಲ್ಲ ಎಂದು ಹಾರಿಹೋಗಿತು. ಪ್ರೀತಿಯಲ್ಲಿ ಇದ್ದವರಿಗೆ ಸಮಯದ ಪರಿವೆ ಇಲ್ಲದಂತೆ ಹೊತ್ತು ಮೂಡಿ ಬಹಳ ಸಮಯವಾಗಿದ್ದು ನೆನಪಿಗೆ ಬಂದುಕ ಸಬರಿಕೆಯನ್ನು ಹಿಡಿಯನ್ನು ಅಮ್ಮಣ್ಣಿಯಮ್ಮನ ಅಂಗಳಕ್ಕೆ ಬರುವ ಹೊತ್ತಿಗೆ ಅಮ್ಮಣ್ಣಿಯಮ್ಮ ಅಂಗಳ ಗೂಡಿಸುವ ಕೆಲಸಕ್ಕೆ ಕೈಯಾಕಿದರು. ಅಷ್ಟರಲ್ಲಿ ಬಂದಚಂದುವನ್ನು ಗಮನಿಸಿ ದೂರುಗುಟ್ಟಿ ನೋಡಿ ಅವಳ ಕಡೆಗೆ ಕ್ಯಾಕರಿಸಿ ಉಗಿದು "ಏನೇ ತೋಕೂರುಗುತ್ತಿನ ಶೆಟ್ಟಿ ನನ್ನನೇ ನೋಡುತ್ತಿದ್ದಿ? ಏನು ನನ್ನನ್ಕೆಲ್ಸ ಮಾಡಿಸ್ತಿದ್ದೀಯಾ ಹೇಗೆ..ಎಂದು"[3] ಅಮ್ಮಣ್ಣಿಯಮ್ಮನ ಮಾತಿನ ಬೈಗಳವನ್ನು ಗಮನಿಸಿದರೆ ಮೇಲ್ವರ್ಗದವರು ದೈಹಿಕ ಶ್ರಮದಾನ ಮಾಡುವಂತಿಲ್ಲ ಅದು ಎನಿದ್ದರೂ ತಳಸಮುದಾಯವರ ಕೆಲಸ ಎಂಬ ಮನೋಭಾವ ಅಮ್ಮಣ್ಣಿಯನ ಮಾತಿನಲ್ಲಿ ಸೂಕ್ಷ್ಮವಾಗಿ ವ್ಯಕ್ತವಾಗಿದೆ. ಅಷ್ಟೇ ಅಲ್ಲದೆ ಅಮ್ಮಣ್ಣಿಯಮ್ಮ ಚಂದುವಿನ ಖಾಸಗಿ ವಿಷಯವನ್ನು ಯಾವುದೇ ನಾಚಿಕೆದಯೆ ಮುಲಾಜಿಲ್ಲದೆ ಎಲ್ಲರ ಎದುರು ನಿರ್ದಾಕ್ಷಿಣ್ಯವಾಗಿ ಮಾತನಾಡಲು ಶುರು ಮಾಡಿದಳು ಅದೆಲ್ಲವನ್ನು ಸಹಿಸಿಕೊಂಡು ಚಂದು ಮೌನವಾಗಿಯೇ ಅವರ ಎಲ್ಲಾ ಮಾತುಗಳನ್ನು ಅವರನ್ನೇ ನುಂಗುವಂತೆ ದಿಟ್ಟಿಸ ತೊಡಗಿದ್ದಳು. ಅಲ್ಲಿಯವರೆಗೆ ಅಮ್ಮಣ್ಣಿಯಮ್ಮನ ಮೇಲಿದ್ದ ಗೌರವಎಲ್ಲಾ ಕಳೆದು ಹೋಯಿತು ಚಂದುವಿಗೆ ಅದಕ್ಕೆ ಪ್ರತಿಯಾಗಿತಿರಸ್ಕಾರ. ಅಸಹನೆ. ಸಿಡುಕಿನಿಂದ ಅಲ್ಲಿ

[2] ಅದೇ. ಪುಟ.55

[3] ಅದೇ. ಪುಟ.57.

ಒಂದುಕ್ಷಣವೂ ಇರದೆ ಅಂಗಳದಿಂದ ನೇರವಾಗಿ ಓಣಿಗಿಳಿದಿದ್ದಳೂ. ಇಂತಹ ಪ್ರತಿರೋಧವನ್ನು ನಿರೀಕ್ಷಿಸದ ಅಮ್ಮಣ್ಣಿಯಮ್ಮ ಚಂದುವನ್ನೇ ಅವಳ ತಂದೆಯನ್ನು ಬೈಯ ತೊಡಗಿದಳು. ಇದೆಲ್ಲ ಹಗರಣವೂ ಮಂಜಪ್ಪನಿಗೂ ತಲುಪಿ ಆಕೆಯನ್ನು ಸಮಾಧಾನ ಪಡಿಸಲು ಅಮ್ಮಣ್ಣಿಯಮ್ಮ ನಿನಗೆ ಯಾವ ವಿವಿಧದಲ್ಲೂ ಸರಿಹೊಂದಲ್ಲ ಅವಳು ನಿನ್ನ ಕಾಲಿನ ಧೂಳಿಗೆ ಸಮಾನ ಎಂದು ಪ್ರೀತಿಯಿಂದ ಚಂದುವನ್ನು ಸಮಾಧಾನ ಪಡಿಸಿದ್ದ ಇದು ಅವಳಲ್ಲಿ ಆತ್ಮಸ್ಥೈರ್ಯವನ್ನು ತುಂಬುವಲ್ಲಿ ಯಶಸ್ವಿಯಾಗಿದ. ಅಷ್ಟೆ ಅಲ್ಲದೆ ಮಂಜಪ್ಪನೂ ಅಮ್ಮಣ್ಣಿಯನ್ನ ಮಾತುಗಳಿಂದ ಚಂದುವಿಗೆ ಆದ ನೋವಿಗೆ ತಾನು ಕೂಡ ಅವರ ಗದ್ದೆಗೆ ಕೋಣ ಉಳುಮೆ ಮಾಡಲು ಬಾಡಿಗೆ ಹೊಡಿಯಲ್ಲ ಎಂದು ಚಂದುವಿನ ಪರ ನಿಂತುತನ್ನ ಪ್ರತಿರೋಧವನ್ನು ತೋರುವುದರ ಜೊತೆಗೆ ಚಂದುವಿಗೆ ಬೆಂಬಲವಾಗಿ ಅಮ್ಮಣ್ಣಿಯಮ್ಮ ವಿರುದ್ಧ ಧೈರ್ಯವಾಗಿ ಹೋರಾಡಲು ಎನ್ನುವುದಕ್ಕಿಂತ ಮೇಲ್ವರ್ಗದವರ ವಿರುದ್ಧತೋರಿದ ಪ್ರತಿರೋದ ಎನ್ನಬಹುದು. ಇಷ್ಟೆಲ್ಲ ಘಟನೆ ನಡೆದ ಮಾರನೇ ದಿನ ಎಂದಿನಂತೆ ಚಂದು ಅಂಗಳ ಗೂಡಿಸುವ ಕಾರ್ಯಕ್ಕೆ ಮುಂದಾದ ಚಂದುವಿಗೆ ಅಮ್ಮಣ್ಣಿಯಮ್ಮ ತುಳಿಸಿ ಕಟ್ಟೆಯ ಬಳಿ ಬಿಡಿಸಿ ವಿಶೇಷವಾದ ರಂಗೋಲಿ ಚಂದುವನ್ನು ಸೆಳೆಯಿತು.ಆ ರಂಗೋಲಿಯಲ್ಲಿ ಇದ್ದ ಚಿತ್ರ ಸುತ್ತಲು ಹಾವು ಮಧ್ಯ ಹೂವಿನ ಚಿತ್ರದ ರಂಗೋಲಿ.ಈ ರಂಗೋಲಿಯಲ್ಲಿ ಚಿತ್ರದ ಪ್ರತಿಮೆಗಳನ್ನು ಗಮನಿಸಿದರೆ ಅಮ್ಮ ಣ್ಣಿಯಮ್ಮ ಹಾವು ಚಂದು ಹೂವು. ಹಾವಿನ ನೆರಳಿನಲ್ಲಿ ಹೂವು ಅರಳುವಂತೆ ಅಂದರೆ ಭಯದ ವಾತಾವರಣದಲ್ಲಿ ತಳಸಮುದಾಯ ಜನರ ಬದುಕುಯಾವಾಗ ಬೇಕಾದರು ಹಾವಿನ ದೋಷಕ್ಕೆ ಬಲಿಯಾಗು ಭಯದಲ್ಲೇ ಇಡಿ ಬದಕನ್ನು ಕಳೆಯುವಂತೆ ಎಂಬುದು ಅರ್ಥದಲ್ಲಿ ನಿರೂಪಿತವಾಗಿದೆ.

ನಿನ್ನೆ ನಡೆದ ಘಟನೆಯಲ್ಲಿ ಚಂದುವನ್ನು ಮನಬಂದಂತೆ ಬೈದಿದ ಅಮ್ಮಣ್ಣಿಯಮ್ಮನ ಯಾವ ಮಾತುಗಳಿಗೂ ಪ್ರತಿಕ್ರಿಯೆ ನೀಡದೆ ನಿರ್ಲಕ್ಷಿಸಿ ಹೋದ ಚಂದುವಿನ ಪ್ರತಿರೋಧಕ್ಕೆ ಅಮ್ಮಣ್ಣಿಯಮ್ಮ ಕೆಂಡಮಂಡಲವಾಗಿ ಹೋಗಿದಳು. ಆದರೆ ರಂಗೋಲಿಯನ್ನೆ ದಿಟ್ಟಿಸಿ ನೋಡುತ್ತಿದ ಚಂದುವಿಗೆ ಅಮ್ಮ ಣ್ಣಿಯಮ್ಮನ ಮೇಲಿನ ಕೋಪ ಭಯಎಲ್ಲಾ ಮಾಯವಾಗಿತ್ತು. ಎಲ್ಲಿ ಈ ರುಕ್ಕನ ಮಗಳು ಮುಂದೊಂದು ದಿನ ನನ್ನ ಮನೆಯ ತುಳಸಿಕಟ್ಟೆಯ ಬಳಿ ರಂಗೋಲಿ ಬಿಡಿಸಿಬಿಟ್ಟಾಳು ಎಂಬ ಆಂತಕದಿಂದ ಜಗಲಿಯಿಂದ ಇಳಿದು ಬಂದುತನ್ನ ಬಲಗಾಲಿನಿಂದ ಒಂದೇ ಉಸಿರಿಗೆ ಅಳಿಸಿ "ಎನೇ ಬೋಳಿಮುಂಡೆ, ನಿನ್ನ ಮಿಂಡ ಕಾಲನ್ನ ಬಗ್ಗಿ ಬಗ್ಗಿ ನೋಡುತ್ತಿದ್ದೀಯಾ"[4] ಎಂದಿದ ಮಾತುಗಳಿಂದ ಚಂದುವಿನಲ್ಲಿದ ಆಕ್ರೋಶಯವೆಲ್ಲಾ ಒಂದೇ ಸಮನೆ ಮೈ ಮೇಲೆ ಬಂದು ಇಷ್ಟು ದಿನದ ಶೋಷಣೆಗೆ ದೌರ್ಜನಕ್ಕೆ ಉತ್ತರ ಎಂತೆ ಚಂದು "ಏನೇ ಬ್ರಾಹ್ಮಣ್ತಿ? ನನ್ನ ಮಿಂಡಕಾಲು ಅನ್ತೀಯಾ ದರ್ವೇಸಿ ಮುಂಡೆ" (ನಾಕನೇ ನೀರು, ಹೆಚ್.ನಾಗವೇಣಿ, ಪು.ಸಂ.67) ಎಂದು ಅಮ್ಮಣ್ಣಿಯಮ್ಮನಿಗೆ ತನ್ನದೇ ಭಾಷೆಯ ಭೈಗುಳದ ಮುಖಾಂತರ ಪ್ರತಿರೋಧವನ್ನು ತೋರಿಸಿದಳು. ಅಷ್ಟಕ್ಕೆ ನಿಲ್ಲದ ಚಂದುವಿನ ಪ್ರತಿರೋಧ ತನ್ನ ಕೈಯಲ್ಲಿದ ಕಸಬರಿಕೆ ಇಂದ ಅಮ್ಮಣ್ಣಿಯಮ್ಮ ಜುಟ್ಟು ಬಗ್ಗಿಸಿ ತಿರುಗಿಸಿ ತಿರುಗಿಸಿ ಬಾರಿಸಿದ್ದಳು. ಇದು ಚಂದು ತನ್ನಲ್ಲೆ ಬದುಕಿನಲ್ಲಿ ಅನುಭವಿಸಿದ ಶೋಷಣೆ ದೌರ್ಜನ್ಯಕ್ಕೆ ತೋರಿದ ಬಹುದೊಡ್ಡ ಪ್ರತಿರೋಧವಾಗಿದೆ. ಅಲ್ಲದೆ ತಳಸಮುದಾಯದವರು ಮೇಲ್ವರ್ಗದವರಿಗೆ ಯಾರು ತೋರದ ಪ್ರತಿರೋಧವು ಹೌದು. ಆದರೆ ಇದು ವಾಸ್ತವದಲ್ಲಿ ಸಾಧ್ಯವೇ? ಎಂಬ ಪ್ರಶ್ನೆಯು ಹುಟ್ಟುತ್ತಾ. ಅದಕ್ಕೆ ಕಾರಣ ಇಲ್ಲಿವರೆಗೂ ಮೇಲ್ವರ್ಗದವರು ತಳಸಮುದಾಯವರನ್ನು ದೈಹಿಕವಾಗಿ ಹಲ್ಲೆ ನಡೆಸಿದರು ಸಾಯಿಸಿದರು ಅದು ಈ ಸಮಾಜದಲ್ಲಿ ದೊಡ್ಡ ಪ್ರಶ್ನೆಯಾಗಲಾರದು. ಆದರೆ ಅದೆ ತಳಸಮುದಾಯದವರು ಮೇಲ್ವರ್ಗದವರನ್ನು

[4] ಅದೇ. ಪುಟ.67.

ಏಕವಚನದಲ್ಲಿ ಸಂಭೋಧಿಸುವ ಹಕ್ಕು ಇಲ್ಲ ಅಂತಹ ಸಂದರ್ಭದಲ್ಲಿ ಲೇಖಕಿಯು ಬದಲಾಗುವ ಸಮಾಜದ ಆಶಯದೊಂದಿಗೆ ಮೇಲ್ವರ್ಗದವರಿಗೆ ಸಾಧ್ಯವಾಗುವ ಎಲ್ಲಾ ವಿಷಯಗಳು ತಳಸಮುದಾಯಗಳಿಗೆ ಏಕೆ ಸಾಧ್ಯವಿಲ್ಲ? ಪ್ರಶ್ನೆಯನ್ನು ನಮ್ಮ ಮುಂದೆ ಇಡುವ ಪ್ರಯತ್ನದ ಜೊತೆಗೆ ಸಂವಿಧಾನದ ಅಡಿಯಲ್ಲಿ ನಾವೆಲ್ಲರೂ ಸಮಾನರು ಎಂದು ಘೋಷವಾಕ್ಯವನ್ನು ಹೇಳುವ ನಾವು ಇನ್ನೂ ಎಂತಹ ಸಮಾಜದಲ್ಲಿ ಬದುಕುತ್ತಿದ್ದೇವೆ ಎಂಬ ಪ್ರಶ್ನೆಯನ್ನು ನಾವು ಕೇಳಿಕೊಳ್ಳುವಂತೆ ಮಾಡಿದರೆ.

ಇದಕ್ಕೆ ಪ್ರತಿಯಾಗಿ ಅಮ್ಮಣ್ಣಿಯಮ್ಮ "ನಂಗೆ ಬ್ರಾಹ್ಮಣ್ತಿಗೆ ಹಿಡಿಸೂಡಿಯಲ್ಲಿ ಹೊಡೆದ್ಯಲ್ಲಾ ನಿನ್ನತಲೆಕೂದಲು ಹಿಡಿಕಡ್ಡಿಯಾಗುತ್ತೆ ನೋಡ್ತಿರು"[5] ಎಂದು ಶಾಪವನ್ನು ಚಂದುವಿಗೆ ಅಮ್ಮಣ್ಣಿಯಮ್ಮ ಅಸಹಾಯಕ ಸ್ಥಿತಿಯಲ್ಲೂ ಅಳುಕಿನಿಂದ ಹೇಳಿದಳು ಇದಕ್ಕೆ ಉತ್ತರ ಎಂಬಂತೆ ಚಂದುವಿನ ಪ್ರತಿರೋಧದ ತೀವ್ರತೆ ಎಷ್ಟೆಂದರೆ "ಬಾಯ್ಮುಚ್ಚು ಬಿಕನಾಸಿ ಬ್ರಾಹ್ಮಣ್ತಿ: ಬಾಯೆತ್ತಿದ್ರೆ ಮತ್ತೆ ಕಾಲಮೆಟ್ಟಲ್ಲಿ ಹೊಡೆದು ಬಿಟ್ಟೇನು"[6] ಎಂದು ಬೈದು ತನ್ನ ಆಕ್ರೋಶವನ್ನು ವ್ಯಕ್ತಪಡಿಸಿದಳು. ಈ ಕತೆಯಲ್ಲಿ ಮುಖ್ಯವಾಗಿ ಸ್ತ್ರೀಯರನ್ನೇ ಏಕೆ? ಮುಖ್ಯ ಪಾತ್ರವಾಗಿಸಿಕೊಂಡು ಲೇಖಕಿ ಎರಡು ಸಮುದಾಯದ ನಡುವಿನ ಸಂಘರ್ಷವನ್ನು ನಿರೂಪಿಸಿರುವುದಾರೆ ಎಂದು ಪ್ರಶ್ನೆ ಹಾಕಿಕೊಂಡರೆ ಇಲ್ಲಿ ಮುಖ್ಯವಾದ ಅಂಶವೆನೆಂದರೆ ಪುರುಷ ಪ್ರಧಾನ ಸಮಾಜದಲ್ಲಿ ಸಂಸ್ಕೃತಿಯನ್ನು ಹುಟ್ಟು ಹಾಕಿ ಅದರ ಹಿನ್ನೆಲೆಯಲ್ಲಿ ಅನೇಕ ಆಚಾರಣೆ ಸಂಪ್ರದಾಯ, ಮೂಢನಂಬಿಕೆಗಳ ಹಿಂದಿನ ಹುನ್ನಾರ ಸ್ತ್ರೀಯರನ್ನು ಮತ್ತು ತಳಸಮುದಾಯಗಳನ್ನು ತನ್ನ ಅಧಿಪತ್ಯದಲ್ಲಿ ಉಳಿಸಿಕೊಂಡು ಅಧಿಕಾರ ಚಲಾಯಿಸುವುದು ಒಂದು ಅಂಶವಾದರೆ, ತಳಸಮುದಾಯದವರನ್ನು ತಮ್ಮ ಭಯದಲ್ಲಿ ಬದುಕುವಂತೆ ಅವರ ಅಭಿವೃದ್ಧಿಗಾಗಿ ಸದಾ ಶ್ರಮಿಸುವಂತೆ ಮಾಡುವುದು ಮತ್ತೊಂದು ಅಂಶ. ಅವರ ಮುಖಾಂತರವೆ ತಮ್ಮ ಅಧಿಕಾರವನ್ನು ಪರೋಕ್ಷವಾಗಿ ಮುಂದುವರಿಸುವ ನಿಟ್ಟಿನಲ್ಲಿಯೇ ಹೆಣ್ಣಿಗೆ ಹೆಣ್ಣೇ ಶತ್ರು ಎಂಬ ನಾಣ್ಣುಡಿಯು ಹುಟ್ಟಿಕೊಂಡಿದು. ಅದಕ್ಕೆ ಇಲ್ಲಿ ಲೇಖಕಿ ಸ್ತ್ರೀ ಪಾತ್ರಗಳನ್ನೆ ಮುಖ್ಯವಾಗಿಸಿ ಇಡಿ ಕಥೆಯಲ್ಲಿ ಎರಡು ಸಮುದಾಯಗಳ ನಡುವಿನ ಸಂಘರ್ಷದ ನೆಲೆಗಳನ್ನು ಮತ್ತು ಅದಕ್ಕೆ ಪತ್ರಿಯಾಗಿ ತಳಸಮುದಾಯದ ಪ್ರತಿರೋಧದ ನೆಲೆಗಳನ್ನು ಚಂದುವಿನ ಮೂಲಕ ನೀಡುವುದರ ಜೊತೆಗೆ ಸಮಾಜದಲ್ಲಿ ಬದಲಾಗಬೇಕಿರುವ ತಳಸಮುದಾಯಗಳ ಪರಿಸ್ಥಿತಿಯನ್ನ ಎಳೆ ಎಳೆಯಾಗಿ ಚಂದುವಿನ ಪಾತ್ರದ ಮೂಲಕ ನಿರೂಪಿಸಿರುವುದು ಗಮರ್ನಹ ವಿಷಯವಾಗಿದೆ.

**ಆಕರ ಗ್ರಂಥ**


- ನಾಗವೇಣಿ. ಎಚ್. (2019). *ನಾಕನೇ ನೀರು.* ಪಲ್ಲವ ಪ್ರಕಾಶನ.


**ಪರಾಮರ್ಶನ ಗ್ರಂಥಗಳು**


- ಚಂದ್ರಶೇಖರ ಪಾಟೀಲ. (2017). *ಕೃತಿಕೇಂದ್ರಿತ ವಿಮರ್ಶಾ ಬರಹಗಳ ಸಂಕಲನ.* ಸಪ್ನ ಬುಕ್‌ಹೌಸ್.
- ಚಂದ್ರಶೇಖರ್, ಟಿ.ಆರ್. (2016). *ಮಹಿಳಾ ಅಧ್ಯಯನ ಪರಿಭಾಷೆ.* ಕುವೆಂಪು ಭಾಷಾ ಭಾರತೀಯ ಪ್ರಾಧಿಕಾರಿ.
- ರಾಮಚಂದ್ರ ಶರ್ಮ. (ಸಂ.). (1999). *ಸಮಕಾಲೀನ ಕನ್ನಡ ಸಣ್ಣಕತೆಗಳು.* ನ್ಯಾಷನಲ್ ಬುಕ್‌ಟ್ರಸ್ಟ್.
- ಸುಮಿತ್ರಾ ಬಾಯಿ, ಬಿ.ಎನ್. (2010). *ಪಶ್ಚಿಮದ ಸ್ತ್ರೀವಾದಿ ವಿಮರ್ಶಾ ಪಂಥಗಳು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.


[5] ಅದೇ. ಪುಟ.67.
[6] ಅದೇ. ಪುಟ.67.